ಅರಕೇಶ್ವರ ನಗರದಲ್ಲಿ ಪಶು ಚಿಕಿತ್ಸಾಲಯ

305 (378) **ಶ್ರೀ ಶ್ರೀನಿವಾಸ್ ಎಂ. (ಮಂಡ್ಯ):–** ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ನಗರದ ಅರಕೇಶ್ವರ ನಗರದಲ್ಲಿ ಪಶು ಚಿಕಿತ್ಸಾಲಯವು ಶಾಲಾ ಕೊಠಡಿಯೊಂದರಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸದರಿ ಪಶು ಚಿಕಿತ್ಸಾ ಕೇಂದ್ರಕ್ಕೆ ಸ್ವಂತ ಕಟ್ಟಡವನ್ನು ಮಂಜೂರು ಮಾಡುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; [ವಿವರ ನೀಡುವುದು]

(ಇ) ಸ್ವಂತ ಕಟ್ಟಡವನ್ನು ಯಾವಾಗ ಮಂಜೂರು ಮಾಡಲಾಗುವುದು ಹಾಗೂ ಅದಕ್ಕೆ ಮೂಲಭೂತ ಸೌಕರ್ಯವನ್ನು ಯಾವಾಗ ಒದಗಿಸಲಾಗುವುದು? [ವಿವರ ನೀಡುವುದು]

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನಾ ಸಚಿವರು):–

(ಅ) ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಗುತ್ತಲು (ಅರಕೇಶ್ವರ ನಗರ) ಸಂಸ್ಥೆಯು ಶಾಲಾ ಆವರಣದ ವ್ಯಾಪ್ತಿಯಲ್ಲಿದ್ದರೂ, ವಿನಾಯಕ ಸಂಘದವರು ನೀಡಿರುವ ಗ್ರಂಥಾಲಯ ಕಟ್ಟಡದ ಒಂದು ಭಾಗದಲ್ಲಿ ಈ ಸಂಸ್ಥೆಗೆ ಸ್ವಂತ ಕಟ್ಟಡ ನಿರ್ಮಾಣವಾಗುವವರೆಗಿನ ಒಪ್ಪಂದದ ಮೇರೆಗೆ ಕಾರ್ಯ ನಿರ್ವಹಿಸುತ್ತಿದೆ.

(ಆ) ಸದರಿ ಸಂಸ್ಥೆಗೆ ಕಟ್ಟಡ ನಿರ್ಮಾಣದ ಉದ್ದೇಶಕ್ಕಾಗಿ ನಿವೇಶನ ಕೋರಿ ಮಂಡ್ಯ ನಗರ ಸಭೆಗೆ ಪತ್ರವನ್ನು ಬರೆಯಲಾಗಿದ್ದು, ನಿವೇಶನವನ್ನು ಪಡೆಯಲು ಪ್ರಯತ್ನ ಮಾಡಲಾಗುತ್ತಿದೆ.

(ಇ) ನಿವೇಶನ ದೊರಕಿದ ನಂತರ ಸ್ವಂತ ಕಟ್ಟಡ ಹಾಗೂ ಮೂಲಭೂತ ಸೌಕರ್ಯವನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಭದ್ರಾವತಿಯಲ್ಲಿ ಇಂಜಿನಿಯರಿಂಗ್ ಕಾಲೇಜು ಮತ್ತು ಬಿ.ಇಡಿ., ಕಾಲೇಜು ತೆರೆಯುವುದು

290 (719) **ಶ್ರೀ ಸಂಗಮೇಶ್ ಬಿ.ಕೆ.:–** ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭದ್ರಾವತಿಯಲ್ಲಿ ನೂತನವಾಗಿ ಇಂಜಿನೀಯರಿಂಗ್ ಕಾಲೇಜು ಮತ್ತು ಸರ್ಕಾರಿ ಬಿ.ಇಡಿ. ಕಾಲೇಜು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;